

ಮನಮೋಹಕ ಪ್ಲಿವ ಜಲಪಾತ



# ಪ್ರಕೃತಿಯ ಮಡಿಲ ಪುಟ್ಟ ಊರು ಯಾಯ್ಚೆ

■ ಸುಚೇತಾ ಕೆ. ನಾರಾಯಣ್

90ರ ದಶಕದಲ್ಲಿ ಯುಗೋಸ್ಲಾವಿಯಾದಿಂದ ಬೇರಾಗಿ ಬೋಸ್ನಿಯಾ ಮತ್ತು ಹರ್ಜೆಗೋವಿನ ಎಂಬ ಪುಟ್ಟ ದೇಶವೊಂದು ಹುಟ್ಟಿಕೊಂಡಾಗ ಅದರ ಪ್ರಜೆಗಳಿಗೇ ಒಮ್ಮತದ ಅಭಿಪ್ರಾಯವಿರಲಿಲ್ಲ. ಮುಂದೆ ಇದು ಅಂತಃಕಲಹಗಳಿಗೆ ಎಡೆ ಮಾಡಿ, ಬಹಳಷ್ಟು ಸಾವು, ನೋವುಗಳಿಗೆ ಕಾರಣವಾಯಿತು. ಬೇವಿನೆಲೆಯನ್ನು ಜಗಿದು ನುಂಗಿದ ಮೇಲೂ, ಬಾಯ ತುಂಬೆಲ್ಲ ಅದರ ಕಹಿ ಉಳಿದೇ ಉಳಿಯುವಂತೆ ನಡೆದ ಯುದ್ಧದ ಕಹಿನೆನಪಿನ್ನೂ ಜನ ಮನದಿಂದ ಪೂರ್ತಿಯಾಗಿ ಮಾಸಿಲ್ಲ. ಆದರೆ ಕಾಲವೆಂಬ ಐಂದ್ರಜಾಲಿಕನ ಕೈಯಲ್ಲಿ ಎಲ್ಲವೂ ಬದಲಾಗುತ್ತಲೇ ಹೋಗುತ್ತದೆ. ಹಾಗಾಗಿ ಹೊಸ ಪೀಳಿಗೆಗೆ ಇವು ಕೇವಲ ಕಥೆಗಳಷ್ಟೇ, ಅನುಭವಕ್ಕೆ ನಿಲುಕದ್ದು.

ನಾವು ಈ ದೇಶಕ್ಕೆ ಪ್ರವಾಸ ಹೊರಟಿದ್ದೇವೆಂದಾಗ, ಅಲ್ಲೇನಿದೆ ಎಂದು ಮೂಗು ಮುರಿದವರೇ ಹೆಚ್ಚು. ಬಡ ದೇಶ, ನಿಮ್ಮ ದುಡ್ಡು, ಪಾಸ್‌ಪೋರ್ಟ್ ಕಿತ್ತುಕೊಂಡಾರು ಎಂಬ ಎಚ್ಚರಿಕೆಯನ್ನು ಕೊಟ್ಟಿದ್ದವರಿದ್ದರು. ಆದರೆ ಆ ಸಲಹೆಗಳನ್ನೆಲ್ಲ ಅಷ್ಟಾಗಿ ಲೆಕ್ಕಿಸದೆ ನಾವು ಬೋಸ್ನಿಯಾದಲ್ಲಿನ ಪುಟ್ಟ ಊರಾದ ತುಜ್ಲಾಕ್ಕೆ ಹಾರಿದ್ದೆವು.

ಉದ್ದುದ್ದಕ್ಕೂ ಹರಡಿರುವ ಮಲೆ ಸಾಲುಗಳ ಮಧ್ಯೆ ಬೆಚ್ಚಗೆ, ನೊಚ್ಚಗೆ ಹರಡಿರುವ ಪುಟ್ಟ ಊರುಗಳು, ವಕ್ರ ವಕ್ರವಾಗಿ ಆ ಗುಡ್ಡಗಳ



ಕೋಟೆಯಿಂದ ಕಂಡ ಊರಿನ ನೋಟ